# ಕರ್ನಾಟಕ ವಿಧಾನ ಸಭೆ

# KARNATAKA LEGISLATIVE ASSEMBLY

ಗುರುವಾರ ೧೦ನೇ ಫೆಬ್ರವರಿ ೧೯೯೪ ಸಾಯನ ಸೌರ ಮಾಘ, ಶಕ ೧೯೧೫

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೩೦ ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

## ಪ್ರಶ್ನೋತ್ತರಗಳು

**(ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)**

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಹಕಾರ ಸಂಘಗಳು**

31 Ë ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

*ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳಿವೆ (ವಿವರ ನೀಡುವುದು)*

*ಆ) ಆ ಪೈಕಿ ಎಷ್ಟು ಲಾಭದಲ್ಲಿವೆ ಮತ್ತು ಎಷ್ಟು ನಷ್ಟದಲ್ಲಿವೆ? (ವಿವರ ನೀಡುವುದು).*

*ಇ) ಒಂದು ವೇಳೆ ನಷ್ಟದಲ್ಲಿ ನಡೆಯುತ್ತಿದ್ದಲ್ಲಿ ಅದಕ್ಕೆ ಕಾರಣಗಳೇನು?*

*ಈ) ನಷ್ಟದಲ್ಲಿ ನಡೆಯುತ್ತಿರುವುದನ್ನು ಪುನಶ್ಚೇತನಗೊಳಿಸಲಾಗುವುದೇ? ಅಥವಾ ಮುಚ್ಚಲಾಗುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) ;

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 167 ಸೇವಾ ಸಹಕಾರ ಸಂಘಗಳಿರುತ್ತದೆ. (ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ-1 ರಲ್ಲಿ ಒದಗಿಸಲಾಗಿದೆ.)

ಆ) ಆ ಪೈಕಿ 75 ಸಂಘಗಳು ಲಾಭದಲ್ಲಿದ್ದು, 92 ಸಂಘಗಳು ನಷ್ಟದಲ್ಲಿವೆ (ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ -1 ರಲ್ಲಿ ಒದಗಿಸಲಾಗಿದೆ).

ಇ) ಸಾಲ ವಸೂಲಾತಿಯ ಪ್ರಮಾಣ ಕಡಿಮೆಯಾಗಿರುವುದು, ಕೃಷಿಗೆ ಅವಶ್ಯವಿರುವ ಸಾಮಗ್ರಿಗಳ ವಿತರಣೆ, ಅವಶ್ಯ ಆಹಾರಗಳ ವಿತರಣೆ ಮುಂತಾದವುಗಳಲ್ಲಿ ಸಂಘಗಳಿಗೆ ಲಭ್ಯವಾಗಿರುವ ಲಾಭಾಂಶ ಕಡಿಮೆ ಇರುವುದು ಹಾಗೂ ಸಂಘಗಳ ಆಡಳಿತ ವೆಚ್ಚ ಹೆಚ್ಚಿಗೆ ಇರುವುದರಿಂದ ಮತ್ತು ಹಣದ ದುರುಪಯೋಗವಾಗಿರುವುದರಿಂದ ಕೆಲವು ಸಂಘಗಳು ನಷ್ಟದಲ್ಲಿರುತ್ತವೆ.

ಈ) ಸಂಘಗಳ ಹಾನಿಯು ಬಹಳ ಹೆಚ್ಚಿನ ಪ್ರಮಾಣದಲ್ಲಿದ್ದು ಸಂಘವನ್ನು ಪುನರುಜ್ಜೀವನಗೊಳಿಸುವುದು ಅಸಾಧ್ಯವಾದಲ್ಲಿ ಮಾತ್ರ ಅಂತಹ ಸಂಘವನ್ನು ಸಮಾಪನಗೊಳಿಸುವುದು.

ಅನುಬಂಧ -1

**ದಿನಾಂಕ : 31-1-1994ರಲ್ಲಿದ್ದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಸೇವಾ ಸಹಕಾರ ಸಂಘಗಳ ತಾಲ್ಲೂಕುವಾರು ವಿವರಗಳು :**

| ಕ್ರ. ಸಂ | ತಾಲ್ಲೂಕಿನ ಹೆಸರು | ಒಟ್ಟು ಸೇವಾ ಸಹಕಾರ ಸಂಘಗಳ ಸಂಖ್ಯೆ | ಲಾಭದಲ್ಲಿರುವ ಸಂಘಗಳ ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) | ನಷ್ಟದಲ್ಲಿರುವ ಸಂಘಗಳ ಸಂಖ್ಯೆ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|---|---|
| 1. | ಮಂಗಳೂರು | 16 | 7 | 11.90 | 9 | 47.34 |
| 2. | ಬಂಟ್ವಾಳ | 27 | 4 | 6.70 | 23 | 111.16 |
| 3. | ಪುತ್ತೂರು | 20 | 10 | 10.60 | 10 | 12.19 |
| 4. | ಬೆಳ್ತಂಗಡಿ | 22 | 4 | 2.92 | 18 | 34.20 |
| 5. | ಸುಳ್ಯ | 21 | 14 | 16.36 | 7 | 9.23 |
| 6. | ಕುಂದಾಪುರ | 20 | 10 | 22.99 | 10 | 58.61 |
| 7. | ಉಡುಪಿ | 21 | 9 | 17.11 | 12 | 76.85 |
| 8. | ಕಾರ್ಕಳ | 20 | 17 | 10.35 | 3 | 0.66 |
| | ಒಟ್ಟು | 167 | 75 | 98.93 | 92 | 350.24 |

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಸೇವಾ ಸಹಕಾರ ಸಂಘಗಳಿವೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ ಒಟ್ಟು 167 ಸೇವಾ ಸಹಕಾರ ಸಂಘಗಳೆಂದು, ಆ ಪೈಕಿ ಎಷ್ಟು ಲಾಭದಲ್ಲಿವೆ? ಮತ್ತು ಎಷ್ಟು ನಷ್ಟದಲ್ಲಿವೆ? ಎಂದಿದ್ದಕ್ಕೆ 75 ಸಂಘಗಳು ಮಾತ್ರ ಲಾಭದಲ್ಲಿದ್ದು, ಅವುಗಳ ಲಾಭ 98.93 ಲಕ್ಷ ರೂಪಾಯಿಗಳೆಂದು ಮತ್ತು 92 ಸಂಘಗಳು ನಷ್ಟದಲ್ಲಿವೆಯೆಂದು ಅವುಗಳು ಒಟ್ಟು 350.24 ಲಕ್ಷ ರೂಪಾಯಿಗಳ ನಷ್ಟ ಅನುಭವಿಸಿರುವುದಾಗಿ ಉತ್ತರಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, 92 ಸಂಘಗಳು 350 ಲಕ್ಷ ರೂಪಾಯಿಗಳಿಗೂ ಮೀರಿ ನಷ್ಟ ಅನುಭವಿಸುತ್ತಿರುವುದನ್ನು ನೋಡಿ ಕುಳಿಕೊಳ್ಳುವುದಕ್ಕಿಂತ ಈ ಸೇವಾ ಸಹಕಾರ ಸಂಘಗಳನ್ನು ಮುಚ್ಚುವುದು ಒಳ್ಳೆಯದಲ್ಲವೆ? ಇವುಗಳನ್ನು ಕೆಲವು ಸ್ಥಳೀಯ ಸಹಕಾರ ಸಂಘಗಳ ಜೊತೆ ವಿಲೀನಗೊಳಿಸಿದರೆ ಇವುಗಳು ನಷ್ಟದಲ್ಲಿ ನಡೆಯುತ್ತಿವೆ ಎಂದು ಹೇಳುವುದು ತಪ್ಪಬಹುದಲ್ಲವೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ನಿಜ. ಸುಮಾರು 92 ಸಹಕಾರ ಸಂಘಗಳಲ್ಲಿ 3 ಕೋಟಿ 50 ಲಕ್ಷ ರೂಪಾಯಿಗಳಿಗೂ ಮೀರಿ ಲುಕ್ಸಾನವಾಗಿದೆ. ಈ ಸಹಕಾರ ಸಂಘಗಳನ್ನು ಸುಧಾರಿಸಬೇಕೆನ್ನುವಂಥ ಪ್ರಯತ್ನವನ್ನು ಮಾಡುತ್ತಿದ್ದೇವೆ. ಆದರೆ, ಇವುಗಳನ್ನು ಮುಚ್ಚುವುದರಿಂದ ಅಲ್ಲಿರುವ ಜನರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆನ್ನುವುದು ತಮಗೆ ಗೊತ್ತಿದೆ. ಇದಕ್ಕೆ ಕಾರಣಗಳು ಕೂಡ ಅನೇಕ ಇವೆ. ಕಾರಣ ಒಂದೇ ಅಲ್ಲ. ಈ ಸಹಕಾರ ಸಂಘಗಳು ನಷ್ಟ ಅನುಭವಿಸುತ್ತಿರುವುದಕ್ಕೆ ಕಾರಣವೇನೆಂದರೆ,

ಅಲ್ಲಿ ಸಾಲ ವಸೂಲಾತಿಯ ಪ್ರಮಾಣ ಕಡಿಮೆಯಿದ್ದು ರೆಕವರಿ ಸರಿಯಾಗಿ ಆಗುತ್ತಿಲ್ಲ. ಅನಂತರ, ಜನರಿಗೆ ಅವಶ್ಯವಾಗಿರುವ ಸಾಮಗ್ರಿಗಳ (ಆಹಾರಧಾನ್ಯಗಳು) ವಿತರಣೆ ಮಾಡುವಾಗ ಮಾರ್ಜಿನ್ ಕೂಡ ಕಡಿಮೆ ಇದೆ. ಮತ್ತು ಅಪೆಕ್ಸ್ ಬ್ಯಾಂಕ್ ಮತ್ತು ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಒದಗಿಸುವ ಸಾಲಕ್ಕೆ ಸಿಗುವ ಬಡ್ಡಿಯಿಂದ ಬರುವ ಲಾಭದ ಅಂತರ ಕಡಿಮೆ ಇದೆ. ಕೆಲವುಕಡೆ ದುರುಪಯೋಗ ಕೂಡ ಆಗಿದೆ. ಆ ಕಾರಣದಿಂದ ಇಂಥ ಸೊಸೈಟಿಗಳನ್ನು ಮುಚ್ಚಿದರೆ ಅಥವಾ ಮರ್ಜ್ ಮಾಡುವುದರಿಂದ ಈ ಸಮಸ್ಯೆ ಬಗೆಹರಿಯುತ್ತದೆ. ಎಂದರೆ ಖಂಡಿತವಾಗಿ ಆ ಕೆಲಸ ಮಾಡೋಣ. ಆದರೆ ಎಲ್ಲಾ ಹಳ್ಳಿಗಳಿಗೆ ಅವಶ್ಯಕ ಸಾಮಗ್ರಿಗಳನ್ನು ವಿ.ಎಸ್.ಎಸ್.ನ ಮುಖಾಂತರ ಸರಬರಾಜು ಮಾಡಬೇಕು ಎನ್ನತಕ್ಕ ಉದ್ದೇಶ ನಮಗೆ ಇದ್ದರೆ ಅಂಥ ಸೊಸೈಟಿಗಳನ್ನು ಮುಚ್ಚಲು ಸಾಧ್ಯವಾಗುವುದಿಲ್ಲ. ನಾವು ಆದಷ್ಟು ಪ್ರಯತ್ನ ಮಾಡಿ ಅದನ್ನು ಅಭಿವೃದ್ಧಿ ಪಡಿಸಲು ಏನಾದರೂ ಯತ್ನಿಸಬೇಕೇ ಹೊರತು ಅವುಗಳನ್ನು ಮುಚ್ಚಿದರೆ ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ತಾವು ಇದನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು, ಯಾವ ರೀತಿಯಲ್ಲಿ ಸುಧಾರಣೆಯನ್ನು ಮಾಡಬೇಕು ಎಂಬ ಬಗ್ಗೆ ಬೇರೆ ಸಲಹೆಗಳನ್ನು ಕೊಡುವುದಾದರೆ ಅದನ್ನು ನಾನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ನಾವು ಈಗಾಗಲೇ ಮಂಗಳೂರು ಜಿಲ್ಲೆಯಲ್ಲಿನ 16ಸೊಸೈಟಿಗಳಿಗೆ ಬಿಜ್ನೆಸ್ ಡೆವಲಪ್ಮೆಂಟ್ ಪ್ರೋಗ್ರಾಮ್ನಲ್ಲಿ ಆರ್ಥಿಕವಾಗಿ ಮತ್ತು ಬೇರೆ ರೀತಿಯಲ್ಲಿ ಸುಧಾರಣೆಯನ್ನು ಮಾಡಿ ಸಹಾಯವನ್ನು ಮಾಡತಕ್ಕಂಥ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ಅವುಗಳು ಎಷ್ಟರಮಟ್ಟಿಗೆ ಸುಧಾರಣೆಯಾಗುತ್ತದೋ ಅದನ್ನು ನೋಡೋಣ. ಒಂದು ವೇಳೆ ಸುಧಾರಣೆಯಾಗದಿದ್ದರೆ ತಾವು ಏನು ಹೇಳುತ್ತೀರೋ ಅದರ ಪ್ರಕಾರ ಪುನರ್ಪರಿಶೀಲನೆ ಮಾಡೋಣ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಸಚಿವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಆದರೂ ಸಹ ಹೆಚ್ಚಿನ ಸಹಕಾರಿ ಸಂಘಗಳು ನಷ್ಟದಲ್ಲಿ ನಡೆಯಲು ಅಲ್ಲಿನ ದುರ್ವ್ಯವಹಾರ ಮತ್ತು ಹಣದ ದುರುಪಯೋಗವೇ ಕಾರಣವಾಗಿದೆ ಎನ್ನತಕ್ಕದ್ದು ನಿಜವಲ್ಲವೆ? ಇದನ್ನು ಸಂಪೂರ್ಣವಾಗಿ ನಿಲ್ಲಿಸಲು ತಾವೇನಾದರೂ ಉಗ್ರಕ್ರಮವನ್ನು ತೆಗೆದುಕೊಂಡಿದ್ದೀರಾ? ಯಾರು ದುರ್ವ್ಯವಹಾರವನ್ನು ಮಾಡಿದ್ದಾರೆ ಅಂಥವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡು ಶಿಕ್ಷೆಯನ್ನು ಕೊಟ್ಟಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಈಗಾಗಲೇ ಎಲ್ಲೆಲ್ಲಿ ದುರ್ವ್ಯವಹಾರವಾಗಿದೆ, ಎಲ್ಲೆಲ್ಲಿ ಮಿಸ್ಅಪ್ರೊಪ್ರಿಯೇಷನ್ಗಳಾಗಿದೆ ಅಂಥ 167ಸೊಸೈಟಿಗಳಲ್ಲಿ ರೆಕವರಿ ಪ್ರೊಸೀಡಿಂಗ್ ಮಾಡುತ್ತಿದ್ದಾರೆ. ಎಷ್ಟು ಸೊಸೈಟಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ ಎನ್ನತಕ್ಕದರ ಬಗ್ಗೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ಆದರೆ ಒಟ್ಟಾರೆ 29 ಲಕ್ಷ ರೂಪಾಯಿಗಳ ಅವ್ಯವಹಾರವಾಗಿದೆ ಎನ್ನತಕ್ಕ ಮಾಹಿತಿ ನನ್ನ ಹತ್ತಿರ ಇದೆ. ತಾವು ಸೊಸೈಟಿವೈಸ್ ಕೇಳಿದರೆ ಬೇಕಾದರೆ ಮಾಹಿತಿಯನ್ನು ಕೊಡುತ್ತೇನೆ. ಆದರೆ ಈ ವಿಷಯದಲ್ಲಿ ನಾವು ಯಾವುದೇ ರೀತಿಯಾದ ಸ್ಕೋಪನ್ನು ಕೊಡುವುದಿಲ್ಲ. ನಾವು ಎಲ್ಲೆಲ್ಲಿ ಇಂಥ ಅವ್ಯವಹಾರವಾಗಿದೆ ಅಂಥ ಸೊಸೈಟಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುವ ಸಲುವಾಗಿ ಈಗಾಗಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿದ್ದೇವೆ. ಉದಾಹರಣೆಗೆ, ಮಂಗಳೂರಿನ ಗುರುಪುರ ವ್ಯವಸಾಯ ಸೇವಾ ಸಹಕಾರಿ ಸಂಘದ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಹಾಕಿದ್ದೇವೆ. ಅದೇ ರೀತಿ ಬಂಟ್ವಾಳದಲ್ಲಿ 9, ಕುಂದಾಪುರದಲ್ಲಿ 4, ಉಡುಪಿಯಲ್ಲಿ 4, ಕಾರ್ಕಳದಲ್ಲಿ 3, ಪುತ್ತೂರಿನಲ್ಲಿ 2, ಬೆಳ್ತಂಗಡಿಯಲ್ಲಿ 3, ಸೂಳ್ಯದಲ್ಲಿ 4, ಸೊಸೈಟಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ.

(ವಿರೋಧ ಪಕ್ಷದ ಸದಸ್ಯರುಗಳು ಸದನಕ್ಕೆ ಆಗಮಿಸಿದರು)